**ಸಾಕ್ಷಿಗೆ ದಿನಾಂಕ : *19-06-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು :ವಾದಿಯರ ಪರ ಶ್ರೀ. ಪಿ. ಆರ್. ಎಸ್ ವಕೀಲರಿಂದ :</u>**

ಸರ್ವೆ ನಂ. *317* ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿದಾರರು ರುದ್ರಪ್ಪ ರವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಮೃತ ಈರಪ್ಪ ಮತ್ತು ಚನ್ನಪ್ಪ ರವರು ಬೇಕಾಯ್ದೇಶೀರ ರೀತಿಯಿಂದ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.ಸರ್ವೆ ನಂ. *317/1* ಮತ್ತ ಸರ್ವೆ ನಂ. *317/2* ಇವುಗಳಿಗೆ ಸಂಬಂಪಟ್ಟಂತೆ ದಿನಾಂಕ *11-10-1995* ರಂದು ರಚನೆಯಾದ ಡ ನಂ.*1928* ಕ್ಕೆ ಸಂಬಂದಪಟ್ಟಂತೆ ವಾಟ್ನಿ ಪತ್ರ ಅಥವಾ ವಿಭಾಗ ಪತ್ರವನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಹಾಜರು ಪಡಿಸಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ನಮ್ಮ ಮನೆತನದಲ್ಲಿ ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲುವಾಟ್ನಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಈರಪ್ಪ, ಚನ್ನಪ್ಪ ಮತ್ತು *2* ನೇ ಪ್ರತಿವಾದಿಯು ಸೇರಿ ಡ ನಂ.*1928* ನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಡ ನಂ. *1928* ಕ್ಕೆ ಸಂಬಂದಪಟ್ಟಂತೆ ಅವರಿಗೆ ನೋಟೀಸ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾದ ಆಸ್ತಿಗಳಾದ ಮನೆ ಮತ್ತು ಖುಲ್ಲಾ ಜಾಗೆಯು ಮೊದಲು ಈರಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಮನೆ ಮತ್ತು ಖುಲ್ಲಾ ಜಾಗೆಯು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಪ್ಲಾಟ ನಂ. *11* ನ್ನು ಗಂಗವ್ವ ಈರಪ್ಪ ಗೋಕಾವಿ ರವರು *10* ರಿಂದ *12* ನೇ ಪ್ರತಿವಾದಿಯರಿಗೆ ದುರುದ್ದೇಶದಿಂದ ವಾದಿಯರಿಗೆ ಪಾಲು ಕೊಡಬಾರದು ಎಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ನಂ.*11* ಎ ಮತ್ತು *14* ಇವುಗಳು *2* ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು, ಬೇಕಾಯ್ದೇಶೀರ ತಮ್ಮ ಹೆಸರನ್ನು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಅವು ಮೊದಲು ಈರಪ್ಪ ರವರ ಹೆಸರಿನಲ್ಲಿ ಇದ್ದು, ಅವರು *2* ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಗಳಲ್ಲಿ ವಾದಿಯರಿಗೂ ಕೂಡ ಪಾಲು ಇರುತ್ತದೆ.

ಸರ್ವೆ ನಂ. *213/*ಸಿ ಕ್ಷೇತ್ರ *4* ಎಕರೆ ಇದು ಮೂಲತಃ ರುದ್ರಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅದು ಅವರಿಗೆ ಸರಕಾರದಿಂದ ಮಂಜೂರಿ ಆಗಿತ್ತು ಎಂದು ಹೇಳುತ್ತಾರೆ. ಸರಕಾರದವರು ರುದ್ರಪ್ಪ ರವರಿಗೆ ಸ್ವಾತಂತ್ರ್ಯ ಹೋರಾಟಗಾರ ಎಂದು ಮಂಜೂರು ಮಾಡಿದ್ದರು ಎಂದರೆ ಸರಿ. ರುದ್ರಪ್ಪ ರವರು ತೀರಿಕೊಂಡ ನಂತರ ದಿನಾಂಕ *20-10-1994* ರಂದು ಈರಪ್ಪ ರವರು ತಾವು ಒಬ್ಬರೇ ವಾರಸುದಾರರೆಂದು ತಮ್ಮ ಹೆಸರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. *213/*ಸಿ ಇದನ್ನು ದಿನಾಂಕ *20-11-1997* ರಂದು *9* ನೇ ಪ್ರತಿವಾದಿಗೆ ಈರಪ್ಪ ರವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವಾಗ ಈರಪ್ಪ ರವರಿಗೆ ಸಂಪೂರ್ಣ ಮಾಲೀಕತ್ವದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.*213/*ಸಿ ಇದರ ಖರೀದಿ ಪತ್ರವು ನಾಮಮಾತ್ರ ಖರೀದಿ ಪತ್ರ

ಆಗಿದ್ದು, ಅದರಲ್ಲಿಯೂ ಕೂಡ ವಾದಿಯರಿಗೆ ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 317/1 ಮತ್ತು ಸರ್ವೆ ನಂ.317/2 ಇವುಗಳಿಗೆ ಸಂಬಂದಪಟ್ಟಂತೆ ಸಾಲ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ಅವುಗಳ ಮೇಲೆ ಸಾಲವನ್ನು ಪಿ ಕೆ ಪಿ ಎಸ್ ಬ್ಯಾಂಕಿನಲ್ಲಿ ತೆಗೆದುಕೊಂಡಿದ್ದೆ ಮತ್ತು ಅದನ್ನು ತೀರಿಸಿರುತ್ತೇನೆ ಎಂದು ಹೇಳುತ್ತಾರೆ. ಸರ್ವ ನಂ. 317/1 ಮತ್ತು ಸರ್ವೆ ನಂ.317/2 ಇವುಗಳ ವ್ಯವಹಾರಗಳಿಗೆ ಸಂಬಂದಪಟ್ಟಂತೆ ವಾದಿಯರಿಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಇರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 9 ನೇ ಪ್ರತಿವಾದಿಯ ಪರ ಶ್ರೀ ಎಮ್ ಹೆಚ್ ಎಮ್ ವಕೀಲರಿಂದ**

ನಮ್ಮ ಮನೆತನದಲ್ಲಿ ರುದ್ರಪ್ಪ ರವರು ತೀರಿಕೊಂಡ 1 ವರ್ಷದ ನಂತರ ಪಾಲುವಾಟ್ನಿ ಆಗಿರುತ್ತದೆ. ಆ ಪಾಲುವಾಟ್ನಿಯಲ್ಲಿ ಶಂಕರಮ್ಮ ರವರನ್ನು ಹೊರತು ಪಡಿಸಿ ಉಳಿದ ಎಲ್ಲ ಸದಸ್ಯರು ಭಾಗ ವಹಿಸಿರುತ್ತಾರೆ. ಪಾಲುವಾಟ್ನಿ ಮಾಡಿಕೊಂಡ ಬಗ್ಗೆ ಶಂಕ್ರಮ್ಮ ರವರ ತಕರಾರು ಇರಲಿಲ್ಲ. ರುದ್ರಪ್ಪರವರ ಮಕ್ಕಳಲ್ಲಿ ಆದ ಪಾಲುವಾಟ್ನಿಯ ಬಗ್ಗೆ ಶಂಕ್ರಮ್ಮ ರವರಿಗೆ ಸಂಪೂರ್ಣ ಒಪ್ಪಿಗೆ ಇತ್ತು ಎಂದರೆ ಸರಿ. ಆ ಪಾಲುವಾಟ್ನಿಯಲ್ಲಿ ಅವರವರಿಗೆ ಬಂದಂತಹ ಆಸ್ತಿಗಳ ಕಬ್ಜಾ ತೆಗೆದುಕೊಂಡು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ರುದ್ರಪ್ಪ ರವರು ತೀರಿಕೊಂಡ ನಂತರ ಪಾಲುವಾಟ್ನಿಯ ಪ್ರಕಾರ ಯಾರು ಯಾರಿಗೆ ಆಸ್ತಿಗಳು ಹೋಗಬೇಕು ಆ ಪ್ರಕಾರ ಕಾಲ ಕಾಲಕ್ಕೆ ತಕ್ಕಂತೆ ಅವರ ಹೆಸರುಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಮ್ಮ ಮನೆತನದಲ್ಲಿ ಆದ ಪಾಲುವಾಟ್ನಿಯ ಪ್ರಕಾರ ತುಳಸಿಗೇರೆ ಗ್ರಾಮದ ಸರ್ವೆ ನಂ.213/ಸಿ ಕ್ಷೇತ್ರ 4 ಎಕರೆ ಇದು ಈರಪ್ಪ ರವರ ಪಾಲಿಗೆ ಬಂದಿತ್ತು ಎಂದರೆ ಸರಿ. ಈರಪ್ಪ ರವರು 9 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು ಸರ್ವೆ ನಂ. 213/ಸಿನ್ನು ತಮ್ಮ ಕಬ್ಜಾವಹಿವಾಟಿಯಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿ. ದಿನಾಂಕ 20-11-1997 ರಲ್ಲಿ ಈರಪ್ಪ ರವರು 9 ನೇ ಪ್ರತಿವಾದಿಗೆ ಸರ್ವೇ ನಂ. 213/ಸಿನ್ನು ಮಾರಾಟ ಮಾಡಿದ್ದು, ನಂತರ 9 ನೇ ಪ್ರತಿವಾದಿಯು ಸದರಿ ಜಮೀನಿನಲ್ಲಿ ನೀರಾವರಿ ಮಾಡಿಸಿರುತ್ತಾರೆ ಎಂದರೆ ಸರಿ. 9 ನೇಪ್ರತಿವಾದಿಯು ಸದರಿ ಜಮೀನಿನಲ್ಲಿ ನೀರಾವರಿ ಮಾಡಲು ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಿರುತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿಯು ಸದರಿ ಜಮೀನನ್ನು ಖರೀದಿ ಮಾಡಿದಾಗಿನಿಂದಲೂ ಅದು ಅವರು ಕಬ್ಜಾದಲ್ಲಿಯೇ ಇರುತ್ತದೆ ಎಂದರೆ ಸರಿ. 9 ನೇ ಪ್ರತಿವಾದಿಯು ಸದರಿ ಜಮೀನನ್ನು ಖರೀದಿ ಮಾಡಿದ ವಿಷಯ ವಾದಿಯರಿಗೆ ಮತ್ತು ಉಳಿದ ಪ್ರತಿವಾದಿಯರಿಗೆ ದಿನಾಂಕ 20-11-1997 ರಿಂದಲೇ ಮಾಹಿತಿ ಇತ್ತು ಎಂದರೆ ಸರಿ. ದಿನಾಂಕ 20-11-1997 ರಿಂದ 9 ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯನ್ನು ಯಾರು ಪ್ರಶ್ನೆ ಮಾಡಿರುವುದಿಲ್ಲ. 9 ನೇ ಪ್ರತಿವಾದಿಯು ಈರಪ್ಪ ರವರ ಮಾಲೀಕತ್ವವನ್ನು ಖಾತರಿ ಪಡಿಸಿಕೊಂಡು ಮತ್ತು ಸದರಿ ಜಮೀನಿಗೆ ಸಂಬಂದಿಸಿದ ಎಲ್ಲ ದಾಖಲೆಗಳನ್ನು ನೋಡಿ ಮತ್ತು ರುದ್ರಪ್ಪ ರವರ ವಾರಸುದಾರರಿಗೆ ಪಾಲುವಾಟ್ನಿ ಯಲ್ಲಿ ಆದ ಜಮೀನುಗಳು ಅವರವರಿಗೆ ಬಂದಿರುತ್ತವೆ ಎಂದು ಖಾತರಿ ಪಡಿಸಿಕೊಂಡು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿಯು ಎಲ್ಲ ಮುತವರ್ಜಿ ವಹಿಸಿ ಸದರಿ ಜಮೀನನ್ನು ಖರೀದಿ ಹಿಡಿದಿದ್ದರಿಂದ ಅವರು ಸದ್ಭಾವನಾ ಖರೀದಿದಾರರು ಇರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ 10 ರಿಂದ 12 ಮತ್ತು 13 ರಿಂದ 16 ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು

ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.